◆ **ಬಯೋಕೆಮಿಸ್ಟ್ರಿ ಸಂಶೋಧಕಿಯಾಗಿದ್ದವರು ಸಂಗೀತ ಕ್ಷೇತ್ರದ ಅನ್ವೇಷಣೆಗೆ ಬಂದ ಬಗೆ ಹೇಗೆ?**

ನನಗೆ ಇದು ಸಾಮಾನ್ಯವಾಗಿ ಎದುರಾಗುವ ಪ್ರಶ್ನೆ. ನಾನು ಸಂಶೋಧನಾ ಕ್ಷೇತ್ರವನ್ನು ಅಥವಾ ಸಂಗೀತವನ್ನು ಆಯ್ಕೆ ಮಾಡಿಕೊಳ್ಳಬೇಕಿತ್ತು ಎಂಬ ವಿಭಾಗೀಕರಣ ಸರಿಯಲ್ಲವೆನಿಸುತ್ತದೆ. ಹಾಗೆ ನೋಡಿದರೆ, ನಮ್ಮ ಬದುಕಿನಲ್ಲಿ ಯಾವುದು ಸಂಶೋಧನೆ ಅಲ್ಲವೆಂದು ಹೇಳೋಣ. ನಾವು ನಿಜಕ್ಕೂ ಸಂಶೋಧನೆಯನ್ನು ಹೇಗೆ ವ್ಯಾಖ್ಯಾನಿಸುತ್ತೇವೆ ಎಂಬುದು ಮುಖ್ಯ ಅಲ್ಲವೇ. ನನ್ನ ಪ್ರಕಾರ, ಯಾವ ಕೆಲಸದಲ್ಲಿ ನಾವು ಸಂಪೂರ್ಣವಾಗಿ ಮನಸ್ಸನ್ನು ತೊಡಗಿಸಿಕೊಂಡು ನಿರ್ವಹಿಸುತ್ತೇವೆಯೋ ಅದು ಸಂಶೋಧನೆಯೇ ಆಗಿರುತ್ತದೆ. ತಲ್ಲೀನತೆಯಿಂದ, ದೇಹ, ಮನಸ್ಸು ಮತ್ತು ಆತ್ಮವನ್ನು ಸಮರ್ಪಿಸಿ ಯಾವ ಕೆಲಸವನ್ನು ನಿರ್ವಹಿಸಿ, ಅದರಲ್ಲಿ ಬೆಳಕನ್ನು ಕಾಣುತ್ತೇವೆಯೋ ಅದು ಸಂಶೋಧನೆ.

ಇದನ್ನು ಇನ್ನಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಾವು ಮಹಾರಾಷ್ಟ್ರದ ಸಂತ ಕವಿಗಳ ಪರಂಪರೆಯತ್ತ ಗಮನಹರಿಸಬಹುದು. ಸಂತ ಕವಿಗಳು ಸಮಾಜದ ವಿವಿಧ ವರ್ಗಗಳಿಗೆ ಸೇರಿದವರಾಗಿದ್ದು, ವಿವಿಧ ರೀತಿಯ ಕಾಯಕಗಳನ್ನು ನಿರ್ವಹಿಸುತ್ತಿದ್ದವರು. ವೃತ್ತಿಯಲ್ಲಿ ಮೇಲು–ಕೀಳು ಎಂಬ ಭೇದವನ್ನು ಕಾಣದವರು. ಕುಂಬಾರರು, ಮಾಲಿಗಳು, ಚಮ್ಮಾರರು ಮುಂತಾಗಿ ಅನೇಕ ರೀತಿಯ ವೃತ್ತಿ ನಿರ್ವಹಣೆ ಮಾಡುವುದರ ಜೊತೆಗೇ, ಭಕ್ತಿ ಕಾವ್ಯ ರಚನೆ ಮಾಡಿದ್ದಾರೆ. ಸಂತ ನಾಮ್ ದೇವ್ ಎಂಬ ದರ್ಜಿಯ ಮನೆಯಲ್ಲಿ ಮಹಿಳೆಯೊಬ್ಬಳು ಮನೆಕೆಲಸ ಮಾಡುತ್ತಿದ್ದಳು. ನಾಮದೇವನೂ ಭಕ್ತನಾಗಿದ್ದವನು. ಆತನ ಮನೆಕೆಲಸದ ಮಹಿಳೆಗೆ ಓದು ಬರಹ ಬರುತ್ತಿರಲಿಲ್ಲ. ಆದರೆ, ತಾನು ಮಾಡುವ ಎಲ್ಲ ಕೆಲಸವನ್ನು ಪ್ರತಿದಿನವೂ ದೇವರಿಗೆ ಅರ್ಪಿಸುತ್ತಿದ್ದೇನೆ ಎಂದವಳು ಭಾವಿಸಿದ್ದಳು. ಬದುಕಿನ ಎಲ್ಲ ಕ್ಷಣಗಳನ್ನೂ ದೇವರಿಗೆ ಸಮರ್ಪಿಸಿದ್ದಾಗಿ ಅವಳು ತನ್ನ ಅಭಂಗ್ ಒಂದರಲ್ಲಿ ಹೇಳುತ್ತಾಳೆ. ಇದು ಅಧ್ಯಾತ್ಮವಲ್ಲದೆ ಮತ್ತೇನು? ಅಧ್ಯಾತ್ಮಕ್ಕಾಗಿ ದೇವರ ಭಯ, ಧರ್ಮ, ಭಕ್ತಿಯೆಂಬ ಹೆಸರುಗಳು ಬೇಕಾಗಿಲ್ಲ. ಅಲ್ಲಿ ಬೇಕಾಗಿರುವುದು ಶ್ರದ್ಧೆಯಷ್ಟೇ. ತಾನು ಅನುಸರಿಸುತ್ತಿದ್ದ ಹಾದಿ ಅಧ್ಯಾತ್ಮದ್ದು ಎಂದು ಅವಳಿಗೆ ಗೊತ್ತಿತ್ತೇ? ಯಾವಾಗ ನಾವು ನಮ್ಮ 'ಅಹಂ' ಅನ್ನು ಸಮರ್ಪಣೆ ಮಾಡುತ್ತೇವೋ ಆಗ ಶ್ರದ್ಧೆಯು ಪರಿಪೂರ್ಣವಾಗುತ್ತದೆ. ದೇವರೆಂಬ ಪರಿಕಲ್ಪನೆಗೆ 'ಅಹಂ' ಅನ್ನು ಸಮರ್ಪಣೆ ಮಾಡಬಹುದು. ನನ್ನ ತಾನ್‌ಪುರವೇ ನನಗೆ ಸಮರ್ಪಣೆಯ ಕೇಂದ್ರವಾಗಿರಬಹುದು ಅಥವಾ ರಾಗವಾಗಿರಬಹುದು. ಅವೆಲ್ಲ ಅವರವರ ಭಾವಕ್ಕೆ ತಕ್ಕುದು.

◆ **ಕಲಾ ಪ್ರಕಾರಗಳು ವ್ಯಕ್ತಿಗೆ–ಸಮಷ್ಟಿಗೆ ಒಳಿತನ್ನು ಬಯಸುವ, ದೇವರನ್ನು ತಲುಪುವ ಅಥವಾ ಮೋಕ್ಷವನ್ನು ಪಡೆಯುವ ಮಾರ್ಗವೆಂಬ ನಂಬಿಕೆಯಿದೆ. ನೀವು ಹೇಳುವ 'ಸಮರ್ಪಣೆ'ಯ ಪರಿಕಲ್ಪನೆ ಇದೇ ಮಾರ್ಗದ ಪ್ರಾರಂಭಿಕ ಹಂತ ಎನ್ನಬಹುದೇ?**

ನಾನು ಪ್ರಜ್ಞಾಪೂರ್ವಕವಾಗಿ ಹಾಗೆ ಯೋಚನೆ ಮಾಡಿದ್ದೇ ಇಲ್ಲ. ಆದರೆ, ಸಂಗೀತದ ಮೂಲಕ ಕೆಲವೊಂದು ವಿಚಾರಗಳನ್ನು ನಾನು ಕಲಿಯುವುದು ಸಾಧ್ಯವಾಗಿದೆ. ಸಂಗೀತಕ್ಕಾಗಲೀ, ಅಧ್ಯಾತ್ಮಕ್ಕಾಗಲೀ, ಮೋಕ್ಷಕ್ಕಾಗಲೀ ಶ್ರದ್ಧೆಯೇ ಬುನಾದಿ. ಯಾವುದೇ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮೋಕ್ಷವೆಂದರೇನು? ನಾನು ಮೋಕ್ಷವನ್ನು ಪಡೆಯಬೇಕು ಎಂಬ ಆಕಾಂಕ್ಷೆಯೇ ಯಾವಾಗ ಅಳಿದುಹೋಗುತ್ತದೋ ಆಗ ಮೋಕ್ಷವು ಲಭ್ಯವಾಗುತ್ತದೆ. ಇನ್ನಷ್ಟು ಸರಳವಾಗಿ ಹೇಳುವುದಾದರೆ, ನೀವು ಏನಾಗಿದ್ದೀರೋ ಆ ಬಗ್ಗೆ ಸಂತೋಷದಿಂದ ಇದ್ದೀರೆಂದರೆ, ಆಕಾಂಕ್ಷೆಗಳ ಜಂಜಡದಿಂದ ಮುಕ್ತರಾಗಿದ್ದೀರಿ ಎಂದು ಅರ್ಥ. ಇದನ್ನೆಲ್ಲ ಫಿಲಸಾಫಿಕಲ್ ಆಗಿ ಹೇಳುವಷ್ಟು ನಾನು ತಜ್ಞಳಲ್ಲ. ನನ್ನ ದಾರಿಯಲ್ಲಿ ನಾನು ಕಂಡುಕೊಂಡ ವಿಚಾರಗಳನ್ನು ತೋಚಿದಂತೆ ಹೇಳುತ್ತಿದ್ದೇನಷ್ಟೇ. ಅಹಂನಿಂದ ದೂರ ಸರಿದು ಸಮರ್ಪಣೆಯ ದಾರಿಯನ್ನು ಆಯ್ದುಕೊಳ್ಳುವುದು ಸುಲಭವೇನೂ ಅಲ್ಲ.

◆ **ಹಾಗಿದ್ದರೆ ಸಮರ್ಪಣೆಯ ದಾರಿಯಲ್ಲಿ ನಿಮ್ಮ**